MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - FRIDAY 14-10-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ವಿಯೆಟ್ನಾಂನ ಗೋಡಂಬಿ ರಫ್ತು 10.6 ಶೇಕಡಾ ಇಳಿಕೆ

2022 ರ ಪ್ರಥಮ 9 ತಿಂಗಳಲ್ಲಿ ವಿಯೆಟ್ನಾಂನಿಂದ ಗೋಡಂಬಿ ರಫ್ತು ಭೌತಿಕ ಗಾತ್ರದಲ್ಲಿ 10.6 ಶೇಕಡಾ ಹಾಗೂ ಮೌಲ್ಯದಲ್ಲಿ 14 ಶೇಕಡಾ ಇಳಿಕೆ ಕಂಡಿದೆಯೆನ್ನಲಾಗಿದೆ. ಈ ಅವಧಿಯಲ್ಲಿ ವಿಯೆಟ್ನಾಂ 382000 ಟನ್ ಗೋಡಂಬಿ ರಫ್ತು ಮಾಡಿದ್ದು 2.29 ಬಿಲಿಯನ್ ಅಮೇರಿಕನ್ ಡಾಲರ್ ಗಳಿಕೆ ಮಾಡಿದೆಯೆನ್ನಲಾಗಿದೆ. ಸೆಪ್ಟೆಂಬರ್ ನಲ್ಲಿ 4000 ಟನ್ ರಫ್ತು ಮಾಡಿದ್ದು 245 ಮಿಲಿಯನ್ ಟನ್ ಆದಾಯ ಗಳಿಸಿದೆಯೆನ್ನಲಾಗಿದ್ದು, ಭೌತಿಕ ಗಾತ್ರದಲ್ಲಿ 2021 ಸೆಪ್ಟೆಂಬರ್ ಗಿಂತ 22.2 ಶೇಕಡಾ ಇಳಿಕೆ ಹಾಗೂ ಮೌಲ್ಯದಲ್ಲಿ 28.2 ಶೇಕಡಾ ಇಳಿಕೆಯಾಗಿದೆಯೆನ್ನಲಾಗಿದೆ. ಜಾಗತಿಕ ಆರ್ಥಿಕ ಮಂದಗತಿ ಗೋಡಂಬಿ ರಫ್ತಿನ ಮೇಲೆ ಪರಿಣಾಮ ಬೀರಿದೆಯೆನ್ನಲಾಗಿದೆ.

## ಟಾಂಜಾನಿಯಾದ ಕಚ್ಚಾ ಗೋಡಂಬಿ ಉತ್ಪಾದನೆ 4 ಲಕ್ಷ ಟನ್‌ಗಳಿಗೇರಿಕೆ

ಪ್ರಸ್ತುತ ಸೀಸನ್‌ನಲ್ಲಿ ಟಾಂಜಾನಿಯಾದ ಕಚ್ಚಾ ಗೋಡಂಬಿ ಉತ್ಪಾದನೆ ಹಿಂದಿನ ಸೀಜನ್‌ನಲ್ಲಿದ್ದ 240000 ಟನ್‌ಗಳಿಂದ 4 ಲಕ್ಷ ಟನ್ ಗಳಿಗೆ ಹೆಚ್ಚಳವಾಗಿದೆಯೆನ್ನಲಾಗಿದೆ. 2025–26 ರ ವೇಳೆ ಟಾಂಜಾನಿಯಾ 7 ಲಕ್ಷ ಟನ್ ಕಚ್ಚಾ ಗೋಡಂಬಿ ಉತ್ಪಾದಿಸುವ ಗುರಿಯಿರಿಸಿಕೊಂಡಿದೆಯೆನ್ನಲಾಗಿದೆ. ಪ್ರಸ್ತುತ 31 ಗೋಡಂಬಿ ಸಂಸ್ಕರಣಾ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿದ್ದು, ಅವುಗಳ ವಾರ್ಷಿಕ ಉತ್ಪಾದನಾ ಸಾಮರ್ಥ್ಯ 64500 ಟನ್‌ಗಳಾಗಿವೆಯೆನ್ನಲಾಗಿದೆ. ಅಲ್ಲಿ ಉತ್ಪಾದಿಸಲಾದ ಗೋಡಂಬಿ ತಿರುಳು ಉತ್ತಮ ಗುಣ ಮಟ್ಟದ್ದಾಗಿದ್ದು ಅಮೇರಿಕಾ ಹಾಗೂ ಯುರೋಪಿಯನ್ ಮಾರುಕಟ್ಟೆಗಳಲ್ಲಿ ಉತ್ತಮ ಬೇಡಿಕೆ ಹೊಂದಿವೆಯೆನ್ನಲಾಗಿದೆ. ಕಚ್ಚಾ ಗೋಡಂಬಿಯ ಏಲಂ ಈ ತಿಂಗಳ 14 ಆರಂಭವಾಗಲಿದೆಯೆನ್ನಲಾಗಿದೆ.

## ಆರ್.ಬಿ.ಡಿ ಪಾಮೆಣ್ಣೆ ಆಮದು ಹಿಂದಿನ 11 ತಿಂಗಳಲ್ಲಿ ಎರಡುವರೆ ಪಟ್ಟು ಅಧಿಕ

ಭಾರತದ ಆರ್.ಬಿ.ಡಿ ಪಾಮೆಣ್ಣೆ ಆಮದು 2021 ನವೆಂಬರ್‌ನಿಂದ 2022 ಸೆಪ್ಟೆಂಬರ್ ವರೆಗಿನ 11 ತಿಂಗಳಲ್ಲಿ ಎರಡುವರೆ ಪಟ್ಟು ಹೆಚ್ಚಳವಾಗಿದೆ. ಇದರ ಹಿಂದಿನ ವರ್ಷ ಇದೇ ಅವಧಿಯಲ್ಲಿ 6.28 ಲಕ್ಷ ಟನ್ ಆರ್.ಬಿ.ಡಿ ಪಾಮೆಣ್ಣೆ ಆಮದು ಮಾಡಿದ್ದು ಈ ವರ್ಷ ಎರಡುವರೆ ಪಟ್ಟು ಅಧಿಕವಾಗಿ 17.12 ಲಕ್ಷ ಟನ್‌ಗಳಾಗಿವೆ. ಈ ಅವಧಿಯ 11 ತಿಂಗಳಲ್ಲಿ ಭಾರತ 130.1 ಲಕ್ಷ ಟನ್ ಸಸ್ಯಜನ್ಯ(ವೆಜಿಟೆಬಲ್) ಎಣ್ಣೆ ಆಮದು ಮಾಡಿದೆಯೆನ್ನಲಾಗಿದೆ. ಇದರಲ್ಲಿ 50 ಶೇಕಡಾ ಪಾಮೆಣ್ಣೆಯಾಗಿದೆ. ಕಚ್ಚಾ ಪಾಮೆಣ್ಣೆ ಆಮದು 68.64 ಲಕ್ಷ ಟನ್‌ಗಳಿಂದ 52.37 ಲಕ್ಷ ಟನ್‌ಗಳಿಗೆ ಇಳಿಕೆಯಾಗಿದೆಯೆಂದು SEA ಅಂಕಿಅಂಶಗಳು ಪ್ರಕಟಗೊಂಡಿದೆ.

## ಸಕ್ಕರೆ ಉತ್ಪಾದನಾ ಸೀಸನ್ ವಿಳಂಬ

ಮಳೆ ಹೆಚ್ಚಳದಿಂದಾಗಿ ಭಾರತದ ಈ ವರ್ಷದ ಸಕ್ಕರೆ ಉತ್ಪಾದನಾ ಸೀಸನ್ ವಿಳಂಬಿತವಾಗಿ ಆರಂಭವಾಗಲಿದೆಯೆನ್ನಲಾಗಿದೆ. 15 ದಿನಗಳ ವಿಳಂಬಿತ ಆರಂಭವಾಗಲಿದೆಯೆನ್ನಲಾಗಿದ್ದು, ಸಕ್ಕರೆ ಮಿಲ್‌ಗಳು ಈಗಾಗಲೇ 1 ಮಿಲಿಯನ್ ಟನ್ ಸಕ್ಕರೆ ರಫ್ತು ಮಾಡಲು ಕರಾರು ಹೊಂದಿದೆಯೆನ್ನಲಾಗಿದ್ದು, ಸರಕಾರ ಅನುಮತಿ ನೀಡಿದ್ದ ಮೇಲೆ ರಫ್ತು ಆರಂಭವಾಗಲಿದೆಯೆನ್ನಲಾಗಿದೆ. ಯು.ಎಸ್ ಗೆ ಸಕ್ಕರೆ ರಫ್ತು ಮಾಡಲು ರಫ್ತು ಕೋಟಾದನ್ವಯ ಡಿಸೆಂಬರ್ 31, 2022 ರ ತನಕ ಅವಧಿ ವಿಸ್ತರಿಸಲಾಗಿದೆಯೆನ್ನಲಾಗಿದೆ.

## ಅಧಿಕ ಮಳೆಯಿಂದ ಬಟಾಟೆ ಉತ್ಪಾದನೆ ಕುಂಠಿತ

ಅಧಿಕ ಮಳೆಯ ಪರಿಣಾಮವಾಗಿ ದೇಶದ ಕೆಲವಡೆ ಬಟಾಟೆ ಬೆಳೆಯ ಮೇಲೆ ಪರಿಣಾಮ ಬೀರಿದ್ದು, ಕೆಲವಡೆ ಬೆಳೆ ನಾಶಗೊಂಡಿದೆಯೆನ್ನಲಾಗಿದೆ. ಕರ್ನಾಟಕದಲ್ಲೂ ಉತ್ಪಾದನೆ ಇಳಿಕೆಯಾಗುವ ನಿರೀಕ್ಷೆಯಿದ್ದು, ಉತ್ತರಪ್ರದೇಶದಲ್ಲಿ ಅಪಾರ ಬೆಳೆಯ ನಾಶವಾಗಿದೆಯೆನ್ನಲಾಗಿದೆ. ಇದರಿಂದ ಬಟಾಟೆ ದರ ಈಗಾಗಲೇ ಹೆಚ್ಚಳವಾಗುತ್ತಿದ್ದು, ದರ ಇನ್ನೂ ಹೆಚ್ಚಳವಾಗುವ ಸಾಧ್ಯತೆಯಿದೆಯೆನ್ನಲಾಗಿದೆ. ಪಶ್ಚಿಮ ಬಂಗಾಲದ ಉತ್ಪಾದನೆ ನಿರೀಕ್ಷೆಗಿಂತ ಕಡಿಮೆಯೆನ್ನಲಾಗಿದ್ದು, ಶೈತಾಗಾರದ ದಾಸ್ತಾನಿನಿಂದ ಮಾರುಕಟ್ಟೆಗೆ ಬಿಡುಗಡೆಯ ಪ್ರಮಾಣವೂ ಇಳಿಕೆಯಾಗಿದೆಯೆನ್ನಲಾಗಿದೆ.